# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 539 |
| 2 | ಸದಸ್ಯರ ಹೆಸರು | : | ಡಾ॥ ತೇಜಸ್ವಿನಿ ಗೌಡ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸುವ ದಿನಾಂಕ | : | 16-12-2021 |
| 4 | ಉತ್ತರಿಸುವವರು | : | ಮುಖ್ಯಮಂತ್ರಿಗಳು |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರಿನಲ್ಲಿರುವ ಬೃಹತ್ ರಾಜಕಾಲುವೆ ಹಾಗೂ ಒಳಚರಂಡಿಗಳ ಸಂಖ್ಯೆ ಎಷ್ಟು; ಅವುಗಳ ನೀರು ಎಲ್ಲಿಗೆ ಹರಿಯುತ್ತದೆ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬೃಹತ್ ರಾಜಕಾಲುವೆಗಳ ಸಂಖ್ಯೆ ಮತ್ತು ಅವುಗಳ ನೀರು ಎಲ್ಲಿಗೆ ಹರಿಯುತ್ತದೆ ಎಂಬ ಮಾಹಿತಿಯನ್ನು **ಅನುಬಂಧ** ದಲ್ಲಿ ನೀಡಿದೆ. |
| ಆ | ಕಾಲ ಕಾಲಕ್ಕೆ ಹೂಳು ತೆಗೆಯಲಾಗುತ್ತದೆಯೇ; ಕೊಳಚೆ ನೀರನ್ನು ಸಂಸ್ಕರಿಸಿ ಹೊರಗೆ ಬಿಡಲಾಗುತ್ತಿದೆಯೇ; | ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ರಾಜಕಾಲುವೆಗಳಲ್ಲಿ ವಾರ್ಷಿಕ ನಿರ್ವಹಣಾ ಯೋಜನೆಯ ಮೂಲಕ ಕಾಲಕಾಲಕ್ಕೆ ಹೂಳು ತೆಗೆಯಲಾಗುತ್ತಿರುತ್ತದೆ. ಒಳಚರಂಡಿ ಕೊಳವೆ ಮಾರ್ಗಗಳಲ್ಲಿ ಶೇಖರಣೆಯಾಗುವ ಹೂಳನ್ನು ಜಲಮಂಡಳಿಯ ಸುಪರ್ದಿಯಲ್ಲಿರುವ ಸಿವರ್ ಜೆಟ್ಟಿಂಗ್ ಯಂತ್ರಗಳನ್ನು ಬಳಸಿ ಕಾಲಕಾಲಕ್ಕೆ ಹೂಳನ್ನು ತೆಗೆಯಲಾಗುತ್ತಿದೆ. ಒಳಚರಂಡಿ ಕೊಳವೆ ಮಾರ್ಗಗಳ ಮೂಲಕ ತ್ಯಾಜ್ಯ ನೀರನ್ನು ಹತ್ತಿರವಿರುವ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳಲ್ಲಿ ಸಂಸ್ಕರಿಸಿ, ಸಂಸ್ಕರಿಸಿದ ತ್ಯಾಜ್ಯ ನೀರನ್ನು ಪುನರ್ ಬಳಕೆ ಮಾಡಲಾಗುತ್ತಿದ್ದು ಸದರಿ ವಿವರ ಕೆಳಕಂಡಂತಿದೆ.<br>➢ ಪ್ರಸ್ತುತ ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯ ಘಟಕಗಳಿಂದ ದ್ವಿತೀಯ ಹಂತದಲ್ಲಿ ಶುದ್ಧೀಕರಣಗೊಳ್ಳುವ 370 ಎಂ.ಎಲ್.ಡಿ ನೀರನ್ನು ಕೋಲಾರ ಜಿಲ್ಲೆಯ ಕೆರೆಗಳಿಗೆ ತುಂಬಿಸಲು ಸಣ್ಣ ನೀರಾವರಿ ಇಲಾಖೆಗೆ ಸರಬರಾಜು ಮಾಡಲಾಗುತ್ತಿದೆ.<br>➢ ಪ್ರಸ್ತುತ ಕೋರಮಂಗಲ ಮತ್ತು ಚಲ್ಲಘಟ್ಟ ಕಣಿವೆಯ ಘಟಕಗಳಿಂದ ದ್ವಿತೀಯ ಹಂತದಲ್ಲಿ ಶುದ್ಧೀಕರಣಗೊಳ್ಳುವ 60 ಎಂ.ಎಲ್.ಡಿ ನೀರನ್ನು ಆನೇಕಲ್ಲು ತಾಲ್ಲೂಕಿನ ಕೆರೆಗಳಿಗೆ ತುಂಬಿಸಲು ಸಣ್ಣ ನೀರಾವರಿ ಇಲಾಖೆಗೆ ಸರಬರಾಜು ಮಾಡಲಾಗುತ್ತಿದೆ.<br>➢ ಪ್ರಸ್ತುತ ಹೆಬ್ಬಾಳ ಕಣಿವೆಯ ಘಟಕಗಳಿಂದ ದ್ವಿತೀಯ ಹಂತದಲ್ಲಿ ಶುದ್ಧೀಕರಣಗೊಳ್ಳುವ 150 ಎಂ.ಎಲ್.ಡಿ ನೀರನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ಕೆರೆಗಳಿಗೆ |

| | | |
|---|---|---|
| | | ತುಂಬಿಸಲು ಸಣ್ಣ ನೀರಾವರಿ ಇಲಾಖೆಗೆ ಸರಬರಾಜು ಮಾಡಲಾಗುತ್ತದೆ.<br>➢ ಕಬ್ಬನ್ ಉದ್ಯಾನವನದಲ್ಲಿರುವ ತೃತೀಯ ಹಂತದ 4 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ರಾಜಭವನ, ವಿಧಾನಸೌಧ, ಉಚ್ಚ ನ್ಯಾಯಾಲಯ, ಗಾಲ್ಫ್ ಕೋರ್ಸ್, ಕಬ್ಬನ್‌ಪಾರ್ಕ್, ನೆಹರು ಪ್ಲಾನಿಟೋರಿಯಂ, ಇಂದಿರಾಗಾಂಧಿ ಫೌಂಟೆನ್ ಪಾರ್ಕ್‌ಗಳ ನೀರಾವರಿಗಾಗಿ ಹಾಗೂ ಕುಡಿಯಲು ಹೊರತುಪಡಿಸಿ ಇತರೆ ಉದ್ದೇಶಗಳಿಗಾಗಿ ಸರಬರಾಜು ಮಾಡಲಾಗುತ್ತದೆ.<br>➢ ಲಾಲ್‌ಬಾಗ್‌ನಲ್ಲಿರುವ ತೃತೀಯ ಹಂತದ 1.5 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಲಾಲ್‌ಬಾಗ್ ಉದ್ಯಾನವನಕ್ಕೆ ಸರಬರಾಜು ಮಾಡಲಾಗುತ್ತದೆ.<br>➢ ಜಕ್ಕೂರಿನಲ್ಲಿರುವ ತೃತೀಯ ಹಂತದ 15 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಯಲಹಂಕದಲ್ಲಿರುವ ಕೆಪಿಸಿಎಲ್ ರವರ ವಿದ್ಯುತ್ ಉತ್ಪಾದನಾ ಸ್ಥಾವರಕ್ಕೆ ಸರಬರಾಜು ಮಾಡಲಾಗುತ್ತದೆ.<br>➢ ಯಲಹಂಕದಲ್ಲಿರುವ 10 ಎಂ.ಎಲ್.ಡಿ ಘಟಕದಲ್ಲಿ ತೃತೀಯ ಹಂತದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ಐಎಎಫ್, ಬಿಇಎಲ್, ರೈಲ್‌ಚಕ್ರ ಕಾರ್ಖಾನೆ, ಐ.ಟಿ.ಸಿ ಇತ್ಯಾದಿ ಸಂಸ್ಥೆಗಳಿಗೆ ಸರಬರಾಜು ಮಾಡಲಾಗುತ್ತದೆ.<br>➢ ದೇವನಹಳ್ಳಿಯಲ್ಲಿರುವ ತೃತೀಯ ಹಂತದ 40 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಕರ್ನಾಟಕ ಕೈಗಾರಿಕಾ ಪ್ರದೇಶಗಳ ಅಭಿವೃದ್ಧಿಗಾಗಿ ಸರಬರಾಜು ಮಾಡಲಾಗುತ್ತದೆ.<br>➢ ವೃಷಭಾವತಿ ಕಣಿವೆಯಲ್ಲಿರುವ ತೃತೀಯ ಹಂತದ 60 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಮೆ॥ ಅರವಿಂದ್ ಮಿಲ್ಸ್, ಮೆ॥ ವಂಡರ್ ಬ್ಲೂಸ್ ಮತ್ತು ಮೆ॥ ನಂದಿ ಎಕನಾಮಿಕ್ ಕಾರಿಡಾರ್ ಎಂಟರ್‌ಪ್ರೈಸಸ್, ಮೆ॥ ಭಾಗ್ಯಲಕ್ಷ್ಮೀ ಫಾರಂ ಮತ್ತು ಮೆ॥ ಟ್ಯಾಂಗ್‌ಲೈಸ್ ಡೆವಲಪರ್ಸ್ (ಗ್ಲೋಬಲ್ ವಿಲೇಜ್) ಗಳಿಗೆ ಸರಬರಾಜು ಮಾಡಲಾಗುತ್ತದೆ. |

| | | |
|---|---|---|
| | | ➢ ಕಾಡುಗೋಡಿಯಲ್ಲಿರುವ ದ್ವಿತೀಯ ಹಂತದ 6 ಎಂ.ಎಲ್.ಡಿ ಘಟಕದಲ್ಲಿ ಶುದ್ಧೀಕರಣಗೊಳ್ಳುವ ನೀರನ್ನು ಮೆ॥ ಹೆಚ್‌ಪಿಸಿಎಲ್ ಗೆ ಸರಬರಾಜು ಮಾಡಲಾಗುತ್ತದೆ.<br><br>ಉಳಿದ ಶುದ್ಧೀಕರಿಸಿದ ತ್ಯಾಜ್ಯ ನೀರನ್ನು ಸುತ್ತಮುತ್ತ ಇರುವ ಕೆರೆಗಳಿಗೆ ಮರು ಪೂರಣಕ್ಕಾಗಿ ಹರಿಸಲಾಗುತ್ತಿದೆ. |
| ಇ | ಇತ್ತೀಚಿಗೆ ಬಿದ್ದ ಮಹಾ ಮಳೆಯಿಂದ ಹರಿದ ನೀರಿನ ಪ್ರಮಾಣ ಎಷ್ಟು; ಇದರಿಂದ ಕಂಡು ಬಂದ ಸಮಸ್ಯೆಗಳಾವುವು; | ನಗರದಲ್ಲಿ ಇತ್ತೀಚಿಗೆ ಬಿದ್ದ ಮಹಾ ಮಳೆಯಿಂದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ತಗ್ಗು ಪ್ರದೇಶಗಳಲ್ಲಿ ಇರುವಂತಹ ಬಡಾವಣೆಗಳಾದ ಪ್ರಮೋದ್ ಬಡಾವಣೆ, ಜ್ಞಾನಭಾರತಿ ಬಡಾವಣೆ, ವಿಜಯಶ್ರೀ ಬಡಾವಣೆ, ಭವಾನಿ ಬಡಾವಣೆ, ಸಣ್ಣಕ್ಕಿ ಬಯಲು ಬಡಾವಣೆ, ವೀರಭದ್ರೇಶ್ವರ ಚಿತ್ರಮಂದಿರ, ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್, ಜೆ.ಎನ್.ಆರ್.ಸಿ, ಗೆದ್ದಲಹಳ್ಳಿ, ಕಸವನಹಳ್ಳಿ, ಜುನ್ನಸಂದ್ರ, ಪೈ ಬಡಾವಣೆ, ಹೆಚ್.ಎಸ್.ಆರ್. ಬಡಾವಣೆ ಹಾಗೂ ಇತರೆ ಪ್ರದೇಶಗಳು ಜಲಾವೃತಗೊಂಡು ಜನಜೀವನ ಅಸ್ತವ್ಯಸ್ತವಾಗಿರುತ್ತದೆ. |
| ಈ | ಬೃಹತ್ ಪ್ರಮಾಣದ ಮಳೆ ನೀರು ಸಂಗ್ರಹ ಮಾಡಲು ರಾಜ ಕಾಲುವೆಗಳನ್ನು ಬಳಸಲಾಗುತ್ತಿದೆಯೇ; ಈ ನೀರು ಕೆರೆಗಳಲ್ಲಿ ಶೇಖರಣೆ ಯಾಗಲು ಕೆರೆಗಳ ಹೂಳನ್ನು ಕಾಲ ಕಾಲಕ್ಕೆ ತೆಗೆಯಲಾಗುತ್ತಿದೆಯೇ; ಬೆಂಗಳೂರಿನಲ್ಲಿ ಈಗಿರುವ ನೀರಿನ ಪ್ರಮಾಣವೆಷ್ಟು; ಎಷ್ಟು ಶುದ್ಧ ನೀರನ್ನು ಹೊಂದಿವೆ? | ಪ್ರಸ್ತುತ ರಾಜಕಾಲುವೆಗಳನ್ನು ಮಳೆ ನೀರು ಹರಿದು ಹೋಗಲು ಮಾತ್ರ ಬಳಸಲಾಗುತ್ತಿದ್ದು, ಮಳೆ ನೀರನ್ನು ಸಂಗ್ರಹಿಸಲಾಗುತ್ತಿಲ್ಲ.<br><br>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೆರೆ ವಿಭಾಗದಿಂದ ಈವರೆವಿಗೂ 85 ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲಾಗಿದ್ದು, ಕೆರೆಯಲ್ಲಿ ಮಳೆ ನೀರನ್ನು ಸಂಗ್ರಹಿಸಲಾಗಿದೆ. |

ಸಂಖ್ಯೆ: ನಅಇ 362 ಎಂಎನ್‌ವೈ 2021

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ

# ಅನುಬಂಧ-1

## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಬೃಹತ್ ಮಳೆನೀರುಗಾಲುವೆ ವಿಭಾಗ

| ಕ್ರ ಸಂ | ವಲಯ | ರಾಜಕಾಲುವೆಗಳ ಸಂಖ್ಯೆ | ಸದರಿ ನೀರುಗಾಲುವೆಗಳ ಹರಿವಿನ ವಿವರ | ಷರಾ |
|---|---|---|---|---|
| 1 | ಪೂರ್ವ | 42 | ಸದರಿ ರಾಜಕಾಲುವೆಗಳು ಬೆಳ್ಳಂದೂರು ಕೆರೆಗೆ ಸೇರಿ ನಂತರ ದಕ್ಷಿಣ ಪಿನಾಕಿನಿ ನದಿಗೆ ಸೇರುತ್ತದೆ. | |
| 2 | ಪಶ್ಚಿಮ | 21 | ಸದರಿ ರಾಜಕಾಲುವೆಗಳು ವೃಷಭಾವತಿ ಕಣಿವೆಯಿಂದ ಕಾವೇರಿ ನದಿಗೆ ಸೇರುತ್ತದೆ. | |
| 3 | ದಕ್ಷಿಣ | 20 | ಸದರಿ ರಾಜಕಾಲುವೆಗಳು ವೃಷಭಾವತಿ ಕಣಿವೆಯಿಂದ ಭೈರಹೊಂಗಲ ಕೆರೆಗೆ ಸೇರುತ್ತದೆ. | |
| 4 | ಕೋರಮಂಗಲ ಕಣಿವೆ | 12 | ಸದರಿ ರಾಜಕಾಲುವೆಗಳು ಬೆಳ್ಳಂದೂರು ಕೆರೆಗೆ ಸೇರುತ್ತದೆ | |
| 5 | ಯಲಹಂಕ | 85 | ಸದರಿ ರಾಜಕಾಲುವೆಗಳು ಹೆಬ್ಬಾಳ ಕಣಿವೆಗೆ ಸೇರುತ್ತದೆ. | |
| 6 | ಮಹದೇವಪುರ | 153 | ಸದರಿ ರಾಜಕಾಲುವೆಗಳು ಬೆಳ್ಳಂದೂರು, ವರ್ತೂರು ಕೆರೆಗೆ ಸೇರಿ ನಂತರ ದಕ್ಷಿಣ ಪಿನಾಕಿನಿ ನದಿಗೆ ಸೇರುತ್ತದೆ. | |
| 7 | ಬೊಮ್ಮನಹಳ್ಳಿ | 126 | ಸದರಿ ರಾಜಕಾಲುವೆಗಳು 58 ವೃಷಭಾವತಿ ಕಣಿವೆಗೆ ಸೇರಿ ಮುಂದೆ ಭೈರಮಂಗಲ ಕೆರೆಯನ್ನು ಸೇರುತ್ತದೆ. ಹಾಗೂ 66 ಕೋರಮಂಗಲ ಕಣಿವೆಗೆ ಸೇರಿ ಕೊನೆಗೆ ಬೆಳ್ಳಂದೂರು ಕೆರೆಗೆ ಸೇರುತ್ತದೆ. | |
| 8 | ರಾ.ರಾ.ನಗರ | 115 | ಸದರಿ ರಾಜಕಾಲುವೆಗಳು ವೃಷಭಾವತಿ ಕಣಿವೆಯಿಂದ ಭೈರಹೊಂಗಲ ಕೆರೆಗೆ ಸೇರುತ್ತದೆ. | |
| 9 | ದಾಸರಹಳ್ಳಿ | 59 | ಸದರಿ ರಾಜಕಾಲುವೆಗಳು ಚಿಕ್ಕಬಾಣಾವರ ಕೆರೆ, ಕರಿವೋಬನಹಳ್ಳಿ ಕೆರೆ, ದೊಡ್ಡಬಿದಿರೆಕಲ್ಲು ಕೆರೆ, ಬಾಗಲಗುಂಟೆ ಕೆರೆಗಳಿಗೆ ಹರಿದು ಅಂತಿಮವಾಗಿ ಅರ್ಕಾವತಿ ನದಿಗೆ ಸೇರುತ್ತದೆ. | |

ಮುಖ್ಯ ಅಭಿಯಂತರರು
ಬೃಹತ ಮಳೆ ನೀರುಗಾಲುವೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ